# ಯಶಸ್ವಿ ನಟ ಆಗಬೇಕು

**ಲಿಶಾಂತ್ ಎಚ್.ಜಿ.**
ಕಲರ್ಸ್ ಕನ್ನಡದ 'ತ್ರಿಪುರ ಸುಂದರಿ'ಯ ಧನಂಜಯ

◆ **ಖಡಕ್ ವಿಲನ್ ಎಂದೇಕೆ ಕರೆಯುತ್ತಾರೆ?**

ಅದನ್ನು ಪಾತ್ರವೇ ನಿರ್ಣಯ ಮಾಡುತ್ತದೆ. ಸೀರಿಯಲ್ ಮೂಲಕ ಪ್ಯಾನ್ ಇಂಡಿಯಾ ಸಿನಿಮಾಗಳಲ್ಲಿ ನಟಿಸುವ ಅವಕಾಶ ಸಿಕ್ಕಿದೆ. ಇಂತಹದ್ದೇ ಪಾತ್ರ ಬೇಕು ಎಂದು ಕಾಯುತ್ತೇನೆ. 'ಕನ್ನಡತಿ' ಆಕಸ್ಮಿಕವಾಗಿ ಸಿಕ್ಕಿತ್ತು. ಗ್ರಿಪ್ ಇರುವ ಪಾತ್ರ ಒಬ್ಬ ಕಲಾವಿದನಿಗೆ ಸಿಕ್ಕಾಗ ಅದು ಅವನ ವೃತ್ತಿ ಜೀವನಕ್ಕೆ ಬೇರೆ ಆಯಾಮವನ್ನೇ ಕೊಡುತ್ತದೆ. 'ಕಾಗದದ ದೋಣಿಯಲ್ಲಿ' ಸಿನಿಮಾದಲ್ಲೂ ವಿಲನ್ ಪಾತ್ರವನ್ನು ಮಾಡಿದ್ದೇನೆ. ಇನ್ನೊಂದು ಸಿನಿಮಾದ ಕೆಲಸ ಆರಂಭವಾಗಬೇಕಿದೆ. ಸೀರಿಯಲ್ ಒಂದು ಬೇಕು ಎಂದು ಕಾಯುತ್ತಿದ್ದೆ. ನನ್ನ ಪಯಣ ಆರಂಭ ಆಗಿದ್ದೆ ಕಿರುತೆರೆಯ ಮೂಲಕ. ಕಲರ್ಸ್‌ನಲ್ಲೇ ಮತ್ತೊಂದು ಒಳ್ಳೆಯ ಪಾತ್ರ ಸಿಕ್ಕಿದೆ. ಜಬರದಸ್ತ್ ಆಗಿರುವ ನೆಗೆಟಿವ್ ಪಾತ್ರ. .

◆ **ಪಾತ್ರಕ್ಕೆ ತಯಾರಿ ಹೇಗೆ ಮಾಡಿಕೊಳ್ಳುತ್ತೀರಿ?**

ಯಾವುದೇ ಪಾತ್ರ ಮಾಡಿದರೂ ಅದಕ್ಕೆ ಶೇ. 100ರಷ್ಟು ನ್ಯಾಯ ಕೊಡಬೇಕು. ಒಂದು ದಿನದ ಪಾತ್ರಗಳಿಗೆ ಬಣ್ಣ ಹಚ್ಚಿದಾಗಲೂ ಅಷ್ಟೇ ಶ್ರಮವನ್ನು ಹಾಕಬೇಕು. ಪಾತ್ರ ನನಗೋಸ್ಕರ ಸಿಕ್ಕಿರುತ್ತದೆ. ಅದರ ಅಗತ್ಯವನ್ನು ಪೂರ್ಣಗೊಳಿಸಬೇಕು ಎಂದೇ ಭಾವಿಸುತ್ತೇನೆ. ಎಷ್ಟೇ ಪಾತ್ರಗಳನ್ನು ಮಾಡಿದ್ದರೂ ನಿರ್ವಹಿಸುವ ಒಂದೊಂದು ಪಾತ್ರದ ಆಳಕ್ಕೆ ಇಳಿಯುತ್ತೇನೆ. ಅಂತಹ ಪಾತ್ರಕ್ಕಾಗಿಯೇ ಕಾಯುತ್ತೇನೆ. ಸ್ವಲ್ಪ ತಡವಾದರೂ ತೊಂದರೆಯಿಲ್ಲ. ನಾನು ಇಷ್ಟಪಡುವ ಪಾತ್ರವೇ ಆಗಬೇಕು. 'ಕನ್ನಡತಿ' ನಂತರ ಸುಮಾರು ಒಂದೂವರೆ ವರ್ಷ ಪಾತ್ರಕ್ಕಾಗಿ ಕಾದಿದ್ದೇನೆ. ಆಗ ಪಾತ್ರ ಸಿಕ್ಕಿಲ್ಲ ಅಂತ ಅಲ್ಲ. ಏನು ಕೊಟ್ಟರೂ ಮಾಡುತ್ತಾನೆ ಅನ್ನುವಂತೆ ಆಗಬಾರದು. ನಟನೆ ಎನ್ನುವುದು ಕೇವಲ ಪ್ಯಾಶನ್ ಮಾತ್ರ ಅಲ್ಲ. ಅದು ನನ್ನ ಜೀವನ. ಈ ಕ್ಷೇತ್ರಕ್ಕೆ ಬಂದು ಏಳು ವರ್ಷಗಳನ್ನು ಸವೆಸಿದ್ದೇನೆ. ನಟನೆಗಾಗಿಯೇ ಜೀವನ ಮುಡಿಪಾಗಿರಿಸಿರುವೆ. ಫೈಟ್, ಜಿಮ್ನಾಸ್ಟಿಕ್, ಮಾರ್ಷಲ್ ಆರ್ಟ್ ಕಲಿತಿದ್ದೇನೆ. ಈಗ ಕತ್ತಿವರಸೆ ಕಲಿಯುತ್ತಿದ್ದೇನೆ. ನಟನಿಗೆ ಏನು ಬೇಕಾಗಬಹುದೋ ಅದಕ್ಕೆ ತಯಾರಿ ಮಾಡಿಕೊಳ್ಳುತ್ತೇನೆ. ವಿಲನ್–ಹೀರೊ ಆಗ್ತೀನಿ ಅಂತ ಅಲ್ಲ. ಯಶಸ್ವಿ ನಟನಾಗಿ ಹೊರಹೊಮ್ಮಬೇಕು. ಬೇರೆ ಬೇರೆ ಭಾಷೆಗಳಲ್ಲಿಯೂ ನಟಿಸಬೇಕು ಎಂಬ ಆಸೆ ಇದೆ. ಎಲ್ಲೇ ಹೋದರೂ ಅತ್ಯುತ್ತಮ ನಟ ಎನ್ನುವುದನ್ನು ಸಾಬೀತು ಮಾಡಬೇಕು. ಇದು ನನ್ನ ಜೀವನದ ಗುರಿ. ಬೇಕಾದಷ್ಟು ಸಮಸ್ಯೆ ಸವಾಲು ಇದ್ದೇ ಇರುತ್ತದೆ. ನನ್ನ ಕೆಲಸ ನಟನೆ ಅದಕ್ಕೆ ಗೌರವ ಕೊಡಬೇಕು. ಅದರ ಅಗತ್ಯಕ್ಕೆ ತಯಾರಿ ಆಗಬೇಕು.

◆ **ದೃಶ್ಯವೊಂದಕ್ಕೆ ಸಿದ್ಧತೆ ಮಾಡಿಕೊಂಡಿರುತ್ತೀರಿ. ಮರುದಿನ ಆಕಸ್ಮಿಕವಾಗಿ ಅದು ಬದಲಾದರೆ.**

ಸೀರಿಯಲ್‌ನಲ್ಲಿ ಒಂದು ದಿನ ಮೊದಲೇ ಸ್ಕ್ರಿಪ್ಟ್ ಸಿಗಲ್ಲ. ಹಿಂದಿನ ದಿನ ನಟಿಸಿ ಹೋಗುವಾಗ ಕೊನೆಯ ಸನ್ನಿವೇಶ ತಲೆಯಲ್ಲಿ ಇಟ್ಟುಕೊಂಡಿರುತ್ತೇವೆ. ಮುಂದೆ ಹೀಗಾಗಬಹುದು ಎಂಬುದು ತಲೆಯಲ್ಲಿ ಹೊಳೆದಿರುತ್ತದೆ. ಮರುದಿನ ಮೇಕಪ್ ಆದ ಮೇಲೆ ಸ್ಕ್ರಿಪ್ಟ್ ಕೊಡುತ್ತಾರೆ. 15 ನಿಮಿಷದಲ್ಲಿ ತಯಾರಿ ಆಗಬೇಕಾಗುತ್ತದೆ. ಸ್ಕ್ರಿಪ್ಟ್ ಸಿಕ್ಕ ತಕ್ಷಣ ಏಕಾಂತದಲ್ಲಿ ಮೊದಲು ಓದುತ್ತೇನೆ. ಅದನ್ನೇನು ಕಂಠಪಾಠ ಮಾಡುವುದಿಲ್ಲ. ಅದು ಏನು ಅನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಮುಖಾಮುಖಿ ಆಗುವ ಪಾತ್ರಗಳು ಮತ್ತು ವಿಷಯ ಏನು ಎಂದು ಗೊತ್ತಾದರೆ ಸುಲಭ. ಬರೆದ ಶಬ್ದವನ್ನೇ ಹೇಳಬೇಕಿಲ್ಲ. ಸಮಾನಾರ್ಥ ನೀಡುವ ಭಾವನೆಯನ್ನು ಸಂವಹನ ಮಾಡಿದರೂ ಸಾಕು. 'ತ್ರಿಪುರ ಸುಂದರಿ' ಸ್ಕ್ರಿಪ್ಟ್ ಸವಾಲಿನಿಂದ ಕೂಡಿದೆ. ಭಾಷೆ ಕ್ಲಿಷ್ಟವಾಗಿದೆ. ಇದನ್ನು ಎದುರಿಸಿ ಗೆದ್ದಾಗ ನಾನು ಒಬ್ಬ ನಟ ಎನ್ನುವುದಕ್ಕೆ ಸಾರ್ಥಕತೆ ಬರುತ್ತದೆ.



◆ **ನಿಮ್ಮ ಬೇರೆ ಆಸಕ್ತಿಗಳು ಏನು?**

ನಟನೆ. ಅದನ್ನು ಬಿಟ್ಟರೆ ನಾನೊಬ್ಬ ಉದ್ಯಮಿ. ಡಬ್ಬಿಂಗ್ ಕಲಾವಿದ ಕೂಡ. ಕೆಲವು ಸೀರಿಯಲ್–ಸಿನಿಮಾಗಳಿಗೆ ಡಬ್ಬಿಂಗ್ ಮಾಡಿದ್ದೇನೆ. ಜೀವನೋಪಾಯಕ್ಕೆ ಬೇರೆ ಕೆಲಸ ಮಾಡುತ್ತೇನೆ. ಒಂದನ್ನೇ ನಂಬಿ ಕುಳಿತುಕೊಳ್ಳುವುದಕ್ಕಿಂತ ಮುಂದೆ ಏನು ಎಂಬ ಪ್ರಶ್ನೆ ಎದುರಾಗಬಾರದು ಎಂದು ಯೋಜಿಸಿದ್ದೇನೆ. ಮೂರು ವರ್ಷದ ಹಿಂದೆ ಇದೆಲ್ಲ ಅರ್ಥ ಮಾಡಿಕೊಂಡ ಮೇಲೆ ಗೊತ್ತಾಯಿತು. ನಟನೆಯ ಕೆಲಸ, ಹುಡುಕಾಟ ಇದ್ದೇ ಇರುತ್ತದೆ. ಪ್ರತಿ ದಿನ ಹುಡುಕುತ್ತಲೇ ಇರಬೇಕು. ಇದು ಖುಷಿ ಕೊಡುತ್ತದೆ. ನಿಂತ ನೀರಾಗುವುದಿಲ್ಲ. ಇಲ್ಲಿ ಏನು ಮಾಡಬೇಕು ಎನ್ನುವುದು ಅರ್ಥ ಆದರೆ ಸುಲಭವಾಗುತ್ತದೆ. ಒಂದು ಹಂತಕ್ಕೆ ಬೆಳೆದ ಮೇಲೆ ಆ ಸಮಸ್ಯೆ ಇರುವುದಿಲ್ಲ. ಆರ್ಥಿಕ ಬಲ ಇದ್ದರೂ ಅಷ್ಟು ಸಮಸ್ಯೆ ಆಗಲಿಕ್ಕಿಲ್ಲ. ಇಲ್ಲದಿದ್ದರೆ ಏನು ಮಾಡಬೇಕು ಎಂದು ನಿರ್ಧರಿಸುವ ಹೊತ್ತಿಗೆ ಸಾಕಷ್ಟು ಸಮಯ ಕಳೆದು ಹೋಗಿರುತ್ತದೆ. ಸಮಯವೇ ದುಡ್ಡಿದ್ದಂತೆ. ಸಮಯಕ್ಕೆ ನಾವು ಸರಿಯಾಗಿ ಕಲಿಯಬೇಕು.

◆ **ರಂಗಭೂಮಿ, ಕಿರುತೆರೆ, ಸಿನಿಮಾ ನಿಮ್ಮ ಬೆಳವಣಿಗೆಗೆ ಹೇಗೆ ಪೂರಕವಾಯಿತು?**

ಬರುವಾಗಲೇ ಈ ಬಗ್ಗೆ ಯೋಜನೆ ರೂಪಿಸಿಕೊಂಡೇ ಬಂದಿದ್ದೆ. ನಟನೆಗೆ ಸಂಬಂಧಿಸಿದಂತೆ ತರಬೇತಿ ಪಡೆಯಬೇಕು ಎಂದು ಅಂದುಕೊಂಡಿದ್ದೆ. ರಂಗಭೂಮಿಯಲ್ಲಿ ಅಭಿನಯದ ತತ್ವ ಕಲಿತೆ. ಅದಾದ ಮೇಲೆ ಸೀರಿಯಲ್ ಮಾಡಬೇಕು. ಅಲ್ಲಿಂದ ಸಿನಿಮಾಕ್ಕೆ ಪ್ರವೇಶ ಮಾಡಬೇಕು ಎಂದುಕೊಂಡಿದ್ದೆ. ಈ ಗ್ರಾಫ್ ಇಟ್ಟುಕೊಂಡೇ ಕೆಲಸ ಮಾಡುತ್ತಿದ್ದೇನೆ. ಮೊದಲ ವರ್ಷ ಡಿಗ್ರಿ ಓದುವಾಗಲೇ ಅರೆಕಾಲಿಕ ಉದ್ಯೋಗವನ್ನು ಹುಡುಕಿಕೊಂಡಿದ್ದೆ. ಓದುವಾಗ ಜಾವಲಿನ್, ಶಾಟ್‌ಪುಟ್‌ನಲ್ಲಿ ರಾಜ್ಯಮಟ್ಟದಲ್ಲಿ ಆಡಿದ್ದೇನೆ.

■ **ರಾಘವೇಂದ್ರ ಕೆ.**